**ಅಸಲು ದಾವಾ ನಂ. 188/2018** **ಪಿ ಡಬ್ಲ್ಯೂ :1**

**(ಇಂದು ದಿನಾಂಕಃ 21-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ಎ ಬಿ ಎಸ್ ರವರಿಂದಃ**

ರಾಮಣ್ಣನವರ ಮಗ ಶಂಕರಪ್ಪ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಅವರು ವಿದ್ಯಾಭ್ಯಾಸ ಮಾಡಿರುವುದಿಲ್ಲ ಎಂದರೆ ಸರಿ. ಅವರು ಹುಟ್ಟಿದಾಗಿನಿಂದ ಮರಣ ಹೊಂದುವವರೆವಿಗೂ ಸೂರನಾಯಕನಹಳ್ಳಿಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಬೆಂಗಳೂರಿಗೆ ಬಂದು ಹೋಗುತ್ತಿದ್ದರು ಎಂದು ಉತ್ತರಿಸುತ್ತಾರೆ. ಅವರು ಬೆಂಗಳೂರಿಗೆ ಬಂದು ಹೋಗುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ಶಂಕರಪ್ಪನವರು ಯಾವಾಗಲೂ ಮಧ್ಯಪಾನ ಮಾಡಿಕೊಂಡು ಊರಿನಲ್ಲಿ ಇರುತ್ತಿದ್ದರು ಎಂದರೆ ಸಾಕ್ಷಿಯು ಮಧ್ಯಪಾನ ಮಾಡುತ್ತಿದ್ದರು, ಆದರೆ ಯಾವಾಗಲೂ ಮಾಡುತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ. ಅವರು ಬೆಂಗಳೂರಿಗೆ ಬಂದು ಹೋಗುತ್ತಿದ್ದರು ಮತ್ತು ಯಾವಾಗಲೂ ಮಧ್ಯಪಾನ ಮಾಡುತ್ತಿರಲಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-9 ಮತ್ತು 10 ಅನ್ನು ಯಾವ ಉದ್ದೇಶಕ್ಕೆ ಹಾಕಿದ್ದೀರಾ ಎಂದರೆ ಸಾಕ್ಷಿಯು ಶಂಕರಪ್ಪ ನನ್ನ ಗಂಡ ಎಂದು ತೋರಿಸಲು ಹಾಕಿರುತ್ತೇನೆ ಎಂದು ಉತ್ತರಿಸುತ್ತಾರೆ. ನಿಪಿ-9 ಮತ್ತು 10 ಅಸಲು ದಾಖಲೆಯಾಗಿದ್ದರೆ ಅದರಲ್ಲಿ ನನ್ನ ಅಥವಾ ಶಂಕರಪ್ಪನವರ ವಿಳಾಸ ಕೊಡುತ್ತಿದ್ದೆ, ಅದನ್ನು ಸೃಷ್ಟಿಸಿದ್ದರಿಂದ ಅದರಲ್ಲಿ ಬೇರೆ ವಿಳಾಸ ಕೊಟ್ಟಿದ್ದೇನೆ ಎಂದರೆ ಸಾಕ್ಷಿಯು ಅದರಲ್ಲಿ ತೋರಿಸಿರುವ ವಿಳಾಸದಲ್ಲಿ ವಾಸವಿದ್ದ ಕಾರಣ ಸದರಿ ವಿಳಾಸ ತೋರಿಸಿರುತ್ತೇನೆ ಎಂದು ಉತ್ತರಿಸುತ್ತಾರೆ.

ರಾಮದೇವರಹಳ್ಳಿಯಲ್ಲಿ ನಾನು 2005 ರಿಂದ 2010 ರವರೆಗೆ ವಾಸವಾಗಿದ್ದೆ. ಬೆಂಗಳೂರಿಗೆ ನಾನು 1999 ರಲ್ಲಿ ಹೋಗಿರುತ್ತೇನೆ. ನಂತರ ತಾಯಿ ಮನೆಗೆ 2000 ನೇ ಇಸವಿಯಲ್ಲಿ ಬಂದಿರುತ್ತೇನೆ. ನಿಪಿ-9 ಮತ್ತು 10 ರಲ್ಲಿ ತಾಯಿ ಮನೆ ವಿಳಾಸ ನಮೂದು ಮಾಡಿದರೆ ಕೇರಾಫ್ ಎಂದು ನಮೂದು ಮಾಡುವುದಿಲ್ಲ ಎಂದರೆ ಸಾಕ್ಷಿಯು ಅದು ನನ್ನ ತಾಯಿ ಮನೆ ವಿಳಾಸ ಎಂದು ಉತ್ತರಿಸುತ್ತಾರೆ. ನಿಪಿ-11 ಅನ್ನು ಯಾರು ಯಾವ ವರ್ಷ ಮಾಡಿದ್ದರು ಎಂದರೆ ಸಾಕ್ಷಿಯು 2003 ರಲ್ಲಿ ನನ್ನ ಗಂಡ, ನಾನು, ನನ್ನ ತಂಗಿ ಮತ್ತು ನನ್ನ ಸಂಬಂಧಿಕರು ಸೇರಿ ಖರೀದಿದಾರರಿಗೆ ಮಾಡಿಕೊಟ್ಟಿದ್ದೆವು ಎಂದು ಉತ್ತರಿಸುತ್ತಾರೆ. ನಿಪಿ-11 ರಲ್ಲಿ ನನ್ನ ವಿಳಾಸ ಯಾವುದು ತೋರಿಸಿರುತ್ತೀರಾ ಎಂದರೆ ಸಾಕ್ಷಿಯು ಬೆಂಗಳೂರಿನ ವಿಳಾಸ ತೋರಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ಸೂರನಾಯಕನಹಳ್ಳಿ ಗ್ರಾಮದ ಬಸವರಾಜಪ್ಪನವರ ಮಗ ಕುಮಾರಸ್ವಾಮಿಯವರ 2ನೇ ಹೆಂಡತಿಯಾಗಿ ಅವರನ್ನು ಮದುವೆಯಾಗಿದ್ದೆ, ಅವರ ಮೊದಲನೇ ಹೆಂಡತಿ ನನ್ನ ವಿರುದ್ಧ ದೂರು ಕೊಡುತ್ತಾರೆ ಎಂದು ನಿಪಿ-9 ರಿಂದ 12 ಅನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-11 ಅಸಲು ದಾಖಲೆಯಾಗಿದ್ದರೆ ಅದರಲ್ಲಿ ಪ್ರತಿವಾದಿಗಳ ಹೆಸರು ಮತ್ತು ವಿಳಾಸ ಸರಿಯಿರುತ್ತಿತ್ತು, ಅವರು ಅಲ್ಲದ ಕಾರಣ ಅದು ತಪ್ಪಾಗಿರುವುದರಿಂದ ಅವರು ಪ್ರಶ್ನೆ ಮಾಡಿದರೂ ಅದು ವಜಾ ಆಗುತ್ತದೆ ಎಂದು ಸದರಿ ದಾಖಲೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಶಂಕರಪ್ಪನವರಿಗೆ ಶಿವಗಂಗಮ್ಮ ಹೆಂಡತಿ ಮತ್ತು ರಾಕೇಶ್ ಮತ್ತು ಕುಮಾರಸ್ವಾಮಿ ಮಕ್ಕಳು ಎಂದರೆ ಸಾಕ್ಷಿಯು

ಅವರು 2ನೇ ಹೆಂಡತಿ ಮತ್ತು ಮಕ್ಕಳು ಎಂದು ಉತ್ತರಿಸುತ್ತಾರೆ. ನಾನು ಶಂಕರಪ್ಪನವರ ಹೆಂಡತಿ ಮತ್ತು 2ನೇ ವಾದಿ ಅವರ ಮಗಳು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. 2ನೇ ವಾದಿ ಶಂಕರಪ್ಪನವರ ಮಗಳಾಗಿದ್ದರೆ ಅವಳ ಶಾಲಾ ದಾಖಲಾತಿಗಳಲ್ಲಿ ಶಂಕರಪ್ಪನವರ ಹೆಸರು ಕೊಡುತ್ತಿದ್ದೆ, ಅವರು ಕುಮಾರಸ್ವಾಮಿಯ ಮಗಳಾಗಿದ್ದರಿಂದ ಕುಮಾರಸ್ವಾಮಿಯ ಹೆಸರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಶಂಕರಪ್ಪನವರನ್ನು ಕುಮಾರಸ್ವಾಮಿ ಎಂದು ಕರೆಯುತ್ತಿದ್ದರು ಎಂದು ಉತ್ತರಿಸುತ್ತಾರೆ. ಶಂಕರಪ್ಪನವರನ್ನು ಕುಮಾರಸ್ವಾಮಿ ಎಂದು ಕರೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. 1 ಮತ್ತು 2ನೇ ಪ್ರತಿವಾದಿಗಳ ಹೆಸರುಗಳನ್ನು ತಪ್ಪಾಗಿ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-9 ರಿಂದ 11 ದಾಖಲೆಯನ್ನು ನನಗೂ ಮತ್ತು ನನ್ನ ಮಗಳಿಗೂ ಅನುಕೂಲವಾಗಲಿ ಎಂದು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೂ ಮತ್ತು ನನ್ನ ಮಗಳಿಗೂ ಶಂಕರಪ್ಪನವರ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲದ ಕಾರಣ ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಒಂದು ವೇಳೆ ಶಂಕರಪ್ಪನವರ ಹೆಂಡತಿ ಆಗಿದ್ದರೆ ಅವರ ಮತದಾರರ ಪಟ್ಟಿಯಲ್ಲಿ ನನ್ನ ಹೆಸರು ಇರುವುದು ಮತ್ತು ಪಡಿತರ ಚೀಟಿಯಲ್ಲಿ ನನ್ನ ಹೆಸರು ಇರುತ್ತಿತ್ತು ಎಂದರೆ ಸಾಕ್ಷಿಯು ಊರಲ್ಲಿ ಇತ್ತು ಎಂದು ಉತ್ತರಿಸುತ್ತಾರೆ. ಯಾವುದೇ ದಾಖಲೆಯಲ್ಲಿ ನಾನು ರಾಮೇಗೌಡರ ಮಗ ಶಂಕರಪ್ಪನ ಹೆಂಡತಿ ಎಂದು ಇಲ್ಲ ಎಂದರೆ ಸಾಕ್ಷಿಯು ಎಲ್ಲ ದಾಖಲೆಯಲ್ಲೂ ಇತ್ತು ಎಂದು ಉತ್ತರಿಸುತ್ತಾರೆ.

ಶಂಕರಪ್ಪ ಮತ್ತು ಕುಮಾರಸ್ವಾಮಿ ಈಗ ಮರಣ ಹೊಂದಿದ್ದರಿಂದ ಸಾಕ್ಷಿ ಹೇಳಲು ಯಾರೂ ಬರುವುದಿಲ್ಲ ಎಂದು ಸುಳ್ಳು ದಾವೆ ಹೂಡಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-- ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**